


ನಾಯಕಿಗೆ ಕೊಡುತ್ತಾನೆ. ಅವಳು ನಾಚುತ್ತಾ “ನೀವೇ ಮುಡಿಸಬಾರದೇ” ಎಂದುಲಿಯುತ್ತಾಳೆ. ಅವನು “ಹಾಗೇನು?” ಎಂದೆನ್ನುತ್ತಾ, ತಿರುಗಿ ನಿಂತ ಅವಳ ಜಡೆಗೆ ಒರಟೊರಟಾಗಿ ಕೂದಲಿನ ದಪ್ಪ ಎಳೆ ತೆಗೆದು ಅದರೊಳಗೆ ಹೂವಿನ ದಂಡೆಯನ್ನು ತುರುಕಿಸುತ್ತಾನೆ. ಅಷ್ಟಕ್ಕೇ ಆ ನಾಯಕಿ ಸಂಭ್ರಮಿಸುತ್ತಾಳೆ! ಆಮೇಲಿನ ಚಲನಚಿತ್ರಗಳಲ್ಲಿ ಒಂದು ಕೆಂಪು ಗುಲಾಬಿಯನ್ನು ಪ್ರೀತಿಯ ಸಂಕೇತವಾಗಿ ನಾಯಕ ನಾಯಕಿಗೆ ಕೊಡುವುದು/ಮುಡಿಸುವುದು ಕಾಣುತ್ತಿತ್ತು. ಈಗಿನ ಚಲನಚಿತ್ರಗಳಲ್ಲಿ ನಾಯಕ ಮಂಡಿಯೂರಿ ಕುಳಿತು ನಾಯಕಿಗೆ ಒಂದು ಕೆಂಪು ಗುಲಾಬಿ ನೀಡಿ “ಐ ಲವ್ ಯೂ” ಎನ್ನುತ್ತಾನೆ. ಅವಳು ಅದನ್ನು ತೆಗೆದುಕೊಂಡ ನಂತರ ಏನು ಮಾಡುತ್ತಾಳೆಂದು ತಿಳಿಯುವುದಿಲ್ಲ. ಏಕೆಂದರೆ ಅಷ್ಟೊತ್ತಿಗಾಗಲೇ ಸೀನ್ ಬದಲಾಗಿ ಅವರಿಬ್ಬರ ಯುಗಳಗೀತೆ, ಕುಣಿತ ಆರಂಭವಾಗಿರುತ್ತದೆ! ಇಂದಿನ ಚಲನಚಿತ್ರಗಳಲ್ಲಿ ನಾಯಕಿಯರು ಗಣೇಶನ ಹಬ್ಬ, ಸತ್ಯನಾರಾಯಣ ಪೂಜೆ ಇಂತಹ ಸನ್ನಿವೇಶಗಳಲ್ಲಿ ಮಾತ್ರ ಮಲ್ಲಿಗೆ ಹೂವನ್ನು ಹೆಗಲ ಮೇಲಿಂದ ಇಳಿಬಿಟ್ಟು ಮುಡಿದಿರುತ್ತಾರೆ.